17-12-2021

44

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಪಿ. ಸುಜಾ ಕುಶಾಲಪ್ಪ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿರುವ " 'ಸಿ ಮತ್ತು ಡಿ' ಭೂಮಿಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ, ಮರಗಳ ಗಣಕೀಕರಣ ಮತ್ತು ಹಬ್ಬ ಹರಿದಿನಗಳಲ್ಲಿ ಬಳಸುತ್ತಿದ್ದ ಮತ್ತು ಪ್ರಾಣಿಗಳ ಸಹಜ ಸಾವಿನ ನಂತರ ಸಂಗ್ರಹಿಸಿಟ್ಟ ಹಳೆ ಕಾಲದ ವಸ್ತುಗಳಾದ ಕೊಂಬು, ಚರ್ಮ ಇತ್ಯಾದಿ ವಸ್ತುಗಳನ್ನು ಇಟ್ಟುಕೊಳ್ಳದಂತೆ ಮತ್ತು ಇಲಾಖೆಗೆ ನೀಡುವಂತೆ ಸರ್ಕಾರ ಹೊರಡಿಸಿರುವ 3 ಆದೇಶವನ್ನು ಕೂಡಲೇ ಹಿಂಪಡೆಯುವ ವಿಷಯದ ಕುರಿತು" ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

**ಪ್ರಶ್ನೆ**: ಪ್ರಕೃತಿಯ ತವರೂರಾದ ಕೊಡಗಿನಲ್ಲಿ, ಕಸ್ತೂರಿ ರಂಗನ್ ವರದಿ, ಸೂಕ್ಷ್ಮ ಪ್ರದೇಶ, ಬಫರ್ ಝೋನ್ ಹೀಗೆ ಹಲವು ನೀತಿಗಳಿಗೆ ಜಿಲ್ಲೆಯಲ್ಲಿ ವ್ಯಾಪಕ ವಿರೋಧ ಇದ್ದು, ಆ ಸಾಲಿಗೆ ಮತ್ತೊಂದು ಪರಿಸರದ ವಿಷಯ ಸೇರ್ಪಡೆಗೊಂಡಿರುತ್ತದೆ. ಕೊಡಗಿನ ವಿವಿಧ ಪಂಚಾಯಿತಿ ವ್ಯಾಪ್ತಿಯ ಜಾಗಗಳನ್ನು ಮೀಸಲು ಅರಣ್ಯ ಪ್ರದೇಶ ಮಾಡಬೇಕೆಂಬ ಕುರಿತಾದ ಆದೇಶ ಪ್ರತಿಗಳು ಸರ್ಕಾರದಿಂದ ಹೊರಡುತ್ತಿರುವುದು ಈ ಭಾಗದ ಜನರಿಗೆ ತಲ್ಲಣ ಉಂಟು ಮಾಡಿದ್ದು, ರಾಜ್ಯ ಸರ್ಕಾರದ ಅಧೀನಕ್ಕೆ ಬರುವ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಕಛೇರಿಯಿಂದ ಜಿಲ್ಲೆಯ ವಿವಿಧ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಕೆಲವೊಂದು ಜಾಗಗಳ ಸರ್ವೆ ನಂಬರ್ ಉಲ್ಲೇಖಿಸಿ ಅದಕ್ಕೆ ಸಂಬಂಧಿಸಿದಂತೆ ವರದಿ ನೀಡುವಂತೆ ಪತ್ರ ರವಾನೆಯಾಗಿತ್ತು. ಅದರಲ್ಲಿರುವ ಅಂಶಗಳಿಗೆ ಕೊಡಗಿನ ಜನರಿಂದ ವ್ಯಾಪಕ ವಿರೋಧ ಉಂಟಾಗುತ್ತಿರುತ್ತದೆ. ಸರ್ಕಾರದ ಜಾಗ ಒತ್ತುವರಿಯಾಗಿದ್ದರೆ ನಿರ್ದಿಷ್ಟ ಅವಧಿಗೆ ಸಾಗುವಳಿ ಉದ್ದೇಶಕ್ಕೆ ಗುತ್ತಿಗೆ ನೀಡುವ ನಿಯಮ ಸರ್ಕಾರವೇ ಜಾರಿಗೊಳಿಸಿದ್ದು, ಈಗ ಜಾಗಗಳನ್ನು ಮೀಸಲು ಅರಣ್ಯ ಮಾಡಬೇಕೆಂಬ ನಿಟ್ಟಿನಲ್ಲಿ ಸರ್ಕಾರವೇ ಕಾರ್ಯತಂತ್ರ ರೂಪಿಸುತ್ತಿರುವುದು ಪ್ರಶ್ನೆಗೆ ಕಾರಣವಾಗಿದೆ. 'ಸಿ ಮತ್ತು ಡಿ' ಭೂಮಿಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ, ಮರಗಳ ಗಣಕೀಕರಣ ಮತ್ತು ಹಬ್ಬ ಹರಿದಿನಗಳಲ್ಲಿ ಬಳಸುತ್ತಿದ್ದ ಮತ್ತು ಪ್ರಾಣಿಗಳ ಸಹಜ ಸಾವಿನ ನಂತರ ಸಂಗ್ರಹಿಸಿಟ್ಟ ಹಳೆ ಕಾಲದ ವಸ್ತುಗಳಾದ ಕೊಂಬು, ಚರ್ಮ ಇತ್ಯಾದಿ ವಸ್ತುಗಳನ್ನು ಇಟ್ಟುಕೊಳ್ಳದಂತೆ ಮತ್ತು ಇಲಾಖೆಗೆ ನೀಡುವಂತೆ ಸರ್ಕಾರ ಹೊರಡಿಸಿರುವ 3 ಆದೇಶಗಳು ಜನರನ್ನು ಗೊಂದಲ ಮತ್ತು ಅತಂತ್ರ ಪರಿಸ್ಥಿತಿಗೆ ದೂಡುತ್ತಿರುವುದು ಶೋಚನಿಯ ಸಂಗತಿ. ಆದ್ದರಿಂದ ಈ 3 ಆದೇಶವನ್ನು ಕೂಡಲೇ ಹಿಂಪಡೆಯುವ ಸಂಬಂಧ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:** ಮೀಸಲು ಅರಣ್ಯವನ್ನಾಗಿ ಅಧಿಸೂಚಿಸುವ ಉದ್ದೇಶಿಸಿರುವ ಪ್ರದೇಶಗಳನ್ನು ಪ್ರಾಥಮಿಕವಾಗಿ ಕರ್ನಾಟಕ ಅರಣ್ಯ ಕಾಯ್ದೆ-1963 ರ ಕಲಂ-4 ರನ್ವಯ ಅಧಿಸೂಚಿಸಲಾಗುತ್ತದೆ. ಕಾರ್ಯವ್ಯಾಪ್ತಿಯ ಅರಣ್ಯ ವ್ಯವಸ್ಥಾಪನಾಧಿಕಾರಿರವರು ಕರ್ನಾಟಕ ಅರಣ್ಯ ಕಾಯ್ದೆಯ ಕಲಂ-5 ರಿಂದ ಕಲಂ-15 ರವರೆಗೆ ವ್ಯವಸ್ಥಾಪನಾ ಕಾರ್ಯವನ್ನು ಕರ್ನಾಟಕ ಅರಣ್ಯ ಕಾಯ್ದೆ-1963 ಹಾಗೂ ಕರ್ನಾಟಕ ಅರಣ್ಯ ನಿಯಮಾವಳಿ-1969 ರ ನಿಬಂಧನೆಗಳನ್ವಯ ನೆರವೇರಿಸಿ, ಕಾರ್ಯವ್ಯಾಪ್ತಿಯ ಜಿಲ್ಲಾಧಿಕಾರಿಗಳ ಮುಖಾಂತರ ಕಲಂ-17 ರನ್ವಯ ಮೀಸಲು ಅರಣ್ಯವನ್ನಾಗಿ ಅಧಿಸೂಚಿಸುವ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಕಳೆದ 2-3 ದಶಕಗಳಿಂದ ಅರಣ್ಯ ವ್ಯವಸ್ಥಾಪನೆ ಪ್ರಕ್ರಿಯೆಗಳಿಗೆ ಒಳಪಟ್ಟು ಕಲಂ-17 ರಡಿ ಅಂತಿಮವಾಗಿ ಅಧಿಸೂಚನೆಯಾಗದೇ ಬಾಕಿ ಉಳಿದಿರುವ ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 562/2009 ರ ಮೇಲೆ ಹೂಡಿರುವ ಮಧ್ಯಂತರ ಅರ್ಜಿ ಸಂಖ್ಯೆ: 37377/2018 ಮತ್ತು ಮಧ್ಯಂತರ ಅರ್ಜಿ ಸಂಖ್ಯೆ: 212/2014 ರ ವಿಚಾರಣೆಯನ್ನು ದಿನಾಂಕ: 19.07.2018 ರಂದು ಮಾನ್ಯ ನ್ಯಾಯಾಲಯವು ಕೈಗೆತ್ತಿಕೊಂಡಾಗ ತೀವ್ರ ಆಕ್ಷೇಪಣೆಯನ್ನು ಮಾಡಿರುವ ಹಿನ್ನಲೆಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಒಂದು ಕಾಲಮಿತಿಯಲ್ಲಿ ಇತ್ಯರ್ಥಪಡಿಸುವ ಉದ್ದೇಶದಿಂದ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ತಾತ್ಕಾಲಿಕ ಹುದ್ದೆಯನ್ನು 2019 ರಿಂದ ಸೃಜಿಸಿ, ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿರುತ್ತದೆ.

ವಿರಾಜಪೇಟೆ ವಿಭಾಗದಲ್ಲಿ ಕಲಂ-4 ರನ್ವಯ ಅಧಿಸೂಚಿಸಲ್ಪಟ್ಟ ಒಟ್ಟು 18 ಪ್ರಕರಣಗಳಲ್ಲಿ 17 ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾರ್ಯವ್ಯಾಪ್ತಿಯ ವ್ಯವಸ್ಥಾಪನಾಧಿಕಾರಿಯು ಕಲಂ-5 ರನ್ವಯ ಉದ್ಘೋಷಣೆಯನ್ನು ಹೊರಡಿಸಿರುತ್ತಾರೆ. ಅರಣ್ಯ ವ್ಯವಸ್ಥಾಪನಾಧಿಕಾರಿರವರು ನಿರ್ವಹಿಸುವ ವ್ಯವಸ್ಥಾಪನಾ ಕಾರ್ಯವು ಅರೆ ನ್ಯಾಯಾಂಗ ಕಾರ್ಯವಾಗಿದ್ದು, ಅರಣ್ಯ ವ್ಯವಸ್ಥಾಪನಾಧಿಕಾರಿರವರು ವ್ಯವಸ್ಥಾಪನಾ ಕಾರ್ಯವನ್ನು ಪೂರ್ಣಗೊಳಿಸಿ, ಕಾರ್ಯವ್ಯಾಪ್ತಿಯ ಜಿಲ್ಲಾಧಿಕಾರಿರವರ ಮುಖಾಂತರ ಕಲಂ-17 ರನ್ವಯ ಮೀಸಲು ಅರಣ್ಯದ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ, ಸರ್ಕಾರವು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಸಚಿವರ ಟಿಪ್ಪಣಿ ಸಂಖ್ಯೆ: ಅ.ಜೀ.ಪ/1625/2024 ದಿನಾಂಕ 18.01.2024ರಲ್ಲಿ ಸರ್ಕಾರಿ ಜಮೀನು, ಗೋಮಾಳ, ಅರಣ್ಯದಂಚಿನ ಹಿಡುವಳಿ ಜಮೀನಿನಲ್ಲಿರುವ ಬಹು ಅಮೂಲ್ಯವಾದ ಶ್ರೀಗಂಧ, ಬೀಟೆ, ಸಾಗುವಾನಿಯಂತಹ ಬೆಲೆಬಾಳುವ ಮರಗಳಿಗೆ ಖಾಸಗಿ ಜಮೀನಿನಲ್ಲಿ ಇರುವಂತಹ ಸರ್ಕಾರದ ಅಧಿಕಾರ ಇರತಕ್ಕಂತ ಮರಗಳಿಗೆ ಗಣಕೀಕರಣ (Geo Tag) ಮಾಡುವ ಬಗ್ಗೆ ಸೂಚಿಸಿಲಾಗಿರುತ್ತದೆ. ಸದರಿ ಟಿಪ್ಪಣಿಯಲ್ಲಿ ಸೂಚಿಸಿರುವಂತೆ, ಮರಗಳ ಎಣಿಕೆ ಪಟ್ಟಿ (Inventory) ಕಾರ್ಯಕ್ರಮ ಕೈಗೊಳ್ಳಲಾಗುವುದರಿಂದ ಅರಣ್ಯ ಸಂರಕ್ಷಣೆಗೆ ಅನುಕೂಲವಾಗುತ್ತದೆ.

ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಅಪಜೀ.103 ಎಫ್‌ಡಬ್ಲ್ಯೂಎಲ್ 2023, ದಿನಾಂಕ:10.01.2024 ರಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972ರ ಸೆಕ್ಷನ್ 64 ರನ್ವಯ ರಾಜ್ಯ ಸರ್ಕಾರಕ್ಕೆ ನೀಡಿರುವ ಅಧಿಕಾರದನ್ವಯ ಈ ಹಿಂದೆ ಒದಗಿಸಿದ ಅವಕಾಶಗಳಲ್ಲಿ ಅಂಗಾಂಗ ಮತ್ತು ಟ್ರೋಫಿಗಳ ಘೋಷಣೆಗಳನ್ನು ಮಾಡಿಕೊಂಡಿರದ ಜನರಿಗೆ ರಾಜ್ಯ ಸರ್ಕಾರದ ಆಸ್ತಿಯಾಗಿರುವ ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ರಾಜ್ಯ ಸರ್ಕಾರಕ್ಕೆ ಅಧ್ಯರ್ಪಿಸಲು 90 ದಿನಗಳ ಅವಕಾಶವನ್ನು ಒದಗಿಸಲಾಗಿತ್ತು. ಸದರಿ ಅವಧಿಯು ದಿನಾಂಕ:09.03.2024ಕ್ಕೆ ಮುಕ್ತಾಯಗೊಂಡಿರುತ್ತದೆ. ಆದುದರಿಂದ ಸದರಿ ಆದೇಶವು ಪ್ರಸ್ತುತ ದಿನಾಂಕಕ್ಕೆ ಅನ್ವಯಿಸದೇ ಇರುವುದರಿಂದ ಹಿಂಪಡೆದು ಪರಿಷ್ಕೃತ ಆದೇಶ ಹೊರಡಿಸುವ ಅವಶ್ಯಕತೆ ಇರುವುದಿಲ್ಲ.

ಸಂಖ್ಯೆ: ಅಪಜೀ 168 ಎಫ್‌ಎಎಫ್ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.